## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 911+907 |
| ಸದಸ್ಯರ ಹೆಸರು | : | ಶ್ರೀ ಅ. ದೇವೇಗೌಡ (ಪದವೀಧರರ ಕ್ಷೇತ್ರ)) ಹಾಗೂ<br>ಶ್ರೀ ಸಿ.ಎನ್ ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 23-02-2023 |
| ಉತ್ತರಿಸುವವರು | : | ಸನ್ಮಾನ್ಯ ಮುಖ್ಯಮಂತ್ರಿಯವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಅನೇಕ ಅರಣ್ಯ ಪ್ರದೇಶಗಳ ಒತ್ತುವರಿ, ನಗರ ಪ್ರದೇಶಗಳ ಪರಿವರ್ತನೆಯಿಂದಾಗಿ ಅರಣ್ಯಗಳ ಸುತ್ತಮುತ್ತ ಬರುವ ನಗರ ಹಾಗೂ ಗ್ರಾಮಗಳಿಗೆ ಆಹಾರ ಅರಸಿ ವನ್ಯ ಮೃಗಗಳು (ಆನೆಗಳ ಹಿಂಡು, ಸಿಂಹ, ಹುಲಿ, ಚಿರತೆ ಇತ್ಯಾದಿ) ಯಾವುದೇ ಮುನ್ಸೂಚನೆ ಇಲ್ಲದೆ ನುಗ್ಗಿ ನಾಗರೀಕರ ಹಾಗೂ ವಾಹನಗಳ ಮೇಲೆ ಇತ್ತೀಚೆಗೆ ಹೆಚ್ಚು ದಾಳಿ ಮಾಡುತ್ತಿದ್ದು, ವನ್ಯ ಮೃಗಗಳು ಅರಣ್ಯ ಪ್ರದೇಶದಿಂದ ನಗರ ಹಾಗೂ ಗ್ರಾಮಗಳಿಗೆ ಬರದಂತೆ ನಿರ್ಬಂದಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ; | ಹೌದು.<br><br>ವನ್ಯ ಮೃಗಗಳು ಅರಣ್ಯ ಪ್ರದೇಶದಿಂದ ನಗರ ಹಾಗೂ ಗ್ರಾಮಗಳಿಗೆ ಬರದಂತೆ ನಿರ್ಬಂಧಿಸಲು ಸರ್ಕಾರ ಹಲವು ಕ್ರಮಗಳನ್ನು ಕೈಗೊಂಡಿದೆ.<br><br>ವಿವರಗಳನ್ನು ಉಪ ಪ್ರಶ್ನೆ (ಇ) ರ ಉತ್ತರದಲ್ಲಿ ನೀಡಲಾಗಿದೆ. |
| ಆ) | ವನ್ಯಮೃಗಗಳ ದಾಳಿಗೊಳಗಾಗಿ ಮೃತಪಟ್ಟ ಅಥವಾ ದಾಳಿಯಿಂದ ವಾಹನಗಳನ್ನು ಜಖಂಗೊಳಿಸಿದ್ದಲ್ಲಿ, ಇದರ ಬಗ್ಗೆ ಸರ್ಕಾರವು ತೆಗೆದುಕೊಂಡ ಕ್ರಮಗಳೇನು; (ಪರಿಹಾರ ಸ್ವರೂಪ, ಹೆಸರು, ವಿಳಾಸ ಹಾಗೂ ಮೊತ್ತದೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು) | ವನ್ಯಪ್ರಾಣಿಗಳ ದಾಳಿಯಿಂದ ಉಂಟಾಗುವ ಮಾನವ ಪ್ರಾಣಹಾನಿ ಪ್ರಕರಣಗಳಿಗೆ ಸರ್ಕಾರದ ಆದೇಶ ಸಂಖ್ಯೆ: ಅಪಜೀ 66 ಎಫ್‌ಡಬ್ಲ್ಯೂಎಲ್ 2019, ದಿನಾಂಕ: 07.01.2020 ರನ್ವಯ ರೂ.7.50 ಲಕ್ಷಗಳು ಪಾವತಿಸಲಾಗುತ್ತಿತ್ತು, ಪ್ರಸ್ತುತ ಸರ್ಕಾರದ ಆದೇಶ ಸಂಖ್ಯೆ: ಅಪಜೀ 114 ಎಫ್‌ಡಬ್ಲ್ಯೂಎಲ್ 2022, ದಿನಾಂಕ: 15.12.2022 ರಲ್ಲಿ ವನ್ಯಪ್ರಾಣಿಗಳ ದಾಳಿಯಿಂದ ಉಂಟಾಗುವ ಮಾನವ ಪ್ರಾಣಹಾನಿ, ಶಾಶ್ವತ ಅಂಗವಿಕಲತೆ, ಭಾಗಶಃ ಅಂಗವಿಕಲತೆ, ಗಾಯಗೊಂಡ ಮತ್ತು ಆಸ್ತಿಪಾಸ್ತಿ ನಷ್ಟ ಪ್ರಕರಣಗಳಲ್ಲಿ ನೀಡುತ್ತಿದ್ದ ಪರಿಹಾರ ಧನವನ್ನು ಪರಿಷ್ಕರಿಸಿ ದ್ವಿಗುಣಗೊಳಿಸಲಾಗಿದೆ.<br><br>ಸದರಿ ಪ್ರಕರಣಗಳಿಗೆ ಸರ್ಕಾರದ ಆದೇಶ ಸಂಖ್ಯೆ:ಅಪಜೀ 143 ಎಫ್‌ಡಬ್ಲ್ಯೂಎಲ್, 2010 ದಿನಾಂಕ:30.04.2011ರ ಪ್ರಕಾರ ಪರಿಹಾರ ಧನ ವಿತರಣೆ ಮಾಡಲು ಸರ್ಕಾರ ಈ ಕೆಳಕಂಡಂತೆ ಮಾನದಂಡಗಳನ್ನು ನಿಗಧಿಪಡಿಸಿದೆ:-<br>1. ವನ್ಯ ಪ್ರಾಣಿಯಿಂದ ಹತ್ಯೆಯಾದ ವ್ಯಕ್ತಿಯು ಅರಣ್ಯ ಪ್ರದೇಶಗಳಲ್ಲಿ ಕಾನೂನು ಬಾಹಿರ ಚಟುವಟಿಕೆಯಲ್ಲಿ ತೊಡಗಿಲ್ಲವೆಂದು ಹಾಗೂ ಮರಣೋತ್ತರ ಪರೀಕ್ಷೆಯ ವರದಿಯಲ್ಲಿ ಮೃತ ವ್ಯಕ್ತಿಯು ವನ್ಯ ಮೃಗಗಳಿಂದ /ವನ್ಯ ಪ್ರಾಣಿಗಳ ದಾಳಿಯಿಂದ ಮೃತನಾಗಿದ್ದಾನೆಂದು ಖಚಿತವಾಗಿ ದೃಢಪಟ್ಟಲ್ಲಿ ಮೃತ ವ್ಯಕ್ತಿಯ ಕಾನೂನುಬದ್ಧ ವಾರಸುದಾರರಿಗೆ ಪರಿಹಾರ ಧನ ಮಂಜೂರು ಮಾಡಲಾಗುವುದು. |

2. ಕಾಡಾನೆಗಳ ಹಾವಳಿಯಿಂದ ನಷ್ಟಕ್ಕೊಳಗಾದ ಆಸ್ತಿ ಅಂದರೆ ಮನೆಗಳು, ಶೆಡ್ಡುಗಳು, ಪಂಪ್ ಹೌಸ್‌ಗಳು, ಪೈಪ್ ಲೈನ್‌ಗಳು, ಬೇಲಿಗಳು ಇತ್ಯಾದಿ ಕಳೆದುಕೊಂಡ ವಾರಸುದಾರರಿಗೆ ಪರಿಹಾರ ಧನ ಮಂಜೂರು ಮಾಡಲಾಗುತ್ತಿದೆ. ವಾಹನಗಳು ಜಖಂಗೊಂಡರೆ ಪರಿಹಾರ ನೀಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ. ಆದುದರಿಂದ, ವಾಹನ ಜಖಂಗೊಂಡರೆ ಯಾವುದೇ ಪರಿಹಾರಧನವನ್ನು ನೀಡಲಾಗುವುದಿಲ್ಲ.

2022-23 ನೇ ಸಾಲಿನಲ್ಲಿ, ವನ್ಯಪ್ರಾಣಿಗಳ ದಾಳಿಯಿಂದ ಮಾನವ ಪ್ರಾಣ ಹಾನಿ ಪ್ರಕರಣಗಳ ವಿವರ **ಅನುಬಂಧ-1ರಲ್ಲಿ** ನೀಡಲಾಗಿದೆ.

ಇ) ನಗರ ಪ್ರದೇಶಗಳನ್ನಾಗಿ ಮಾಡಲು ರಾಜ್ಯದ ಅರಣ್ಯ ಪ್ರದೇಶಗಳನ್ನು ಪರಿವರ್ತನೆ ಮಾಡುವುದನ್ನು ಸರ್ಕಾರವು ತಡೆಹಿಡಿದು, ವನ್ಯಮೃಗಗಳು ನಗರ ಪ್ರದೇಶ ಹಾಗೂ ಗ್ರಾಮಗಳಿಗೆ ಆಹಾರಕ್ಕಾಗಿ ವಲಸೆ ಬರುವುದನ್ನು ತಪ್ಪಿಸುವ ಬಗ್ಗೆ ಸರ್ಕಾರ ಕೈಗೊಳ್ಳುವ ಕ್ರಮಗಳೇನು? (ವಿವರ ಒದಗಿಸುವುದು)

**ರಾಜ್ಯದಲ್ಲಿ ವನ್ಯಜೀವಿಗಳ ದಾಳಿಯ ನಿಯಂತ್ರಣಕ್ಕೆ ಹಾಗೂ ಗ್ರಾಮಗಳಿಗೆ ವಲಸೆ ಬರುವುದನ್ನು ತಪ್ಪಿಸಲು ಕೈಗೊಂಡಿರುವ ಕ್ರಮಗಳ ವಿವರ ಕೆಳಕಂಡಂತಿದೆ:-**

1. 95 ಪ್ರಾಣಿ ಹಿಮ್ಮೆಟ್ಟಿಸುವ ತಂಡವನ್ನು (ADC) ರಚಿಸಿ ವನ್ಯಪ್ರಾಣಿಗಳನ್ನು ಹಿಮ್ಮೆಟ್ಟಿಸಲಾಗುತ್ತಿದೆ.
2. 33 ಕ್ಷಿಪ್ರ ಸ್ಪಂದನಾ ತಂಡ (RRT) ವನ್ನು ರಚಿಸಿ ಗಸ್ತು ಕಾರ್ಯ ಕೈಗೊಳ್ಳುತ್ತಿದ್ದು, ವನ್ಯಪ್ರಾಣಿ ಹಾವಳಿ ಕಂಡು ಬಂದ ಕೂಡಲೇ ಹಿಮ್ಮೆಟ್ಟಿಸುವ ಕಾರ್ಯ ಕೈಗೊಳ್ಳಲಾಗುತ್ತಿದೆ.
3. ಕಳೆದ ಮೂರು ಹಣಕಾಸು ವರ್ಷಗಳಲ್ಲಿ ಕೈಗೊಳ್ಳಲಾದ ಮಾನವ-ಆನೆ ಸಂಘರ್ಷ ತಗ್ಗಿಸುವ ಕಾರ್ಯಗಳ ವಿವರ ಕೆಳಕಂಡಂತಿದೆ:-

(ವಿಸ್ತೀರ್ಣ ಕಿ.ಮೀ.ಗಳಲ್ಲಿ)

| ಕ್ರ. ಸಂ. | ಕೈಗೊಂಡಿರುವ ಕಾಮಗಾರಿ ವಿವರ | 2019- 20 | 2020-21 | 2021-22 |
|---|---|---|---|---|
| 1 | ಆನೆ ತಡೆ ಕಂದಕ ನಿರ್ಮಾಣ / ನಿರ್ವಹಣೆ | 281.04 | 189.82 | 291.06 |
| 2 | ಸೌರಶಕ್ತಿ ಬೇಲಿ ನಿರ್ಮಾಣ / ಮತ್ತು ನಿರ್ವಹಣೆ | 352.62 | 372.31 | 381.25 |
| 3 | ಉಪಯೋಗಿತ ರೈಲ್ವೆ ಹಳಿಗಳನ್ನು ಉಪಯೋಗಿಸಿ ರೈಲ್ವೆ ಬ್ಯಾರಿಕೇಡ್ ನಿರ್ಮಾಣ | 65.488 | 33.81 | 35.63 |

4. ಸರ್ಕಾರದ ಆದೇಶ ಸಂಖ್ಯೆ: ಅಪಜೀ 170 ಎಫ್‌ಡಬ್ಲ್ಯೂಎಲ್ 2022, ಮತ್ತು ಅಪಜೀ 311 ಎಫ್‌ಇಜಿ 2022(ಇ), ದಿನಾಂಕ: 21.11.2022 ಗಳಲ್ಲಿ ಹಾಸನ, ಚಿಕ್ಕಮಗಳೂರು ಮೈಸೂರು, ಕೊಡಗು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಕಾಡಾನೆ ಹಾವಳಿ ಹೆಚ್ಚಾಗಿರುವ ಭಾಗಗಳಲ್ಲಿ ಕಾಡಾನೆ ಹಾವಳಿಯನ್ನು ತಡೆಗಟ್ಟಲು ಪ್ರತಿ ಜಿಲ್ಲೆಗೊಂದರಂತೆ ಅಧಿಕಾರಿ / ಸಿಬ್ಬಂದಿಗಳನ್ನೊಳಗೊಂಡ ಆನೆ ಕಾರ್ಯಪಡೆ (Elephant Task Force) ಯನ್ನು ರಚಿಸಲಾಗಿದೆ.

5. ಸದರಿ ಆನೆ ಕಾರ್ಯಪಡೆಗಾಗಿ ನಿಯಂತ್ರಣ ಕೊಠಡಿಯನ್ನು ಸ್ಥಾಪಿಸಿದ್ದು, ನಿಯಂತ್ರಣ ಕೊಠಡಿಗೆ ಬರುವ ಕರೆಗಳಿಗೆ ಸ್ಪಂದಿಸಿ ಕಾಡಾನೆಗಳನ್ನು ಹಿಮ್ಮೆಟ್ಟಿಸುವ ಕಾರ್ಯ ಕೈಗೊಳ್ಳಲಾಗುತ್ತಿದೆ.

6. ಆನೆ ಕಾರ್ಯಪಡೆಯ ಕಾರ್ಯಾಚರಣೆಗಾಗಿ 5 ವಾಹನ ಮತ್ತು ಅಗತ್ಯ ಪರಿಕರಗಳನ್ನು ಒದಗಿಸಿಕೊಟ್ಟು, ಹೊರಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿಗಳನ್ನು ನಿಯೋಜಿಸಿಕೊಂಡು ಕಾರ್ಯನಿರ್ವಹಿಸಲಾಗುತ್ತಿದೆ.

7. ಕಾಡಾನೆ ಗುಂಪಿನಲ್ಲಿನ ವಯಸ್ಕ ಹೆಣ್ಣಾನೆಯನ್ನು ಗುರುತಿಸಿ ಅದಕ್ಕೆ ರೇಡಿಯೋ ಕಾಲರ್ ಅಳವಡಿಸಿ ಆನೆಗಳ ಚಲನ-ವಲನಗಳ ಬಗ್ಗೆ ಎಸ್.ಎಂ.ಎಸ್. ಹಾಗೂ ವಾಟ್ಸಾಪ್ ಮೂಲಕ ಜನರಿಗೆ ಮಾಹಿತಿಯನ್ನು ನೀಡಿ ಮಾನವ ಪ್ರಾಣಹಾನಿ ಹಾಗೂ ಮಾನವ ಗಾಯ ತಪ್ಪಿಸಲು ಕ್ರಮ ವಹಿಸಲಾಗುತ್ತಿದೆ.

8. ಸಾರ್ವಜನಿಕರಿಗೆ ಉಪಟಳ ನೀಡುತ್ತಿರುವ ಪುಂಡಾನೆಗಳನ್ನು ಗುರುತಿಸಿ, ಸೆರೆಹಿಡಿದು ಆಗಿಂದಾಗ್ಗೆ ಸೂಕ್ತ ಆವಾಸ ಸ್ಥಾನ / ಆನೆ ಶಿಬಿರಗಳಿಗೆ ಸ್ಥಳಾಂತರಿಸಲಾಗಿದೆ.

**<u>ಚಿರತೆ ಹಾವಳಿ ತಡೆಗಟ್ಟಲು:</u>**

ರಾಜ್ಯದಲ್ಲಿ ಚಿರತೆ ಹಾವಳಿ ತಡೆಗಟ್ಟಲು ಎಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಮುಂಜಾಗ್ರತಾ ಕ್ರಮವಾಗಿ ತಮ್ಮ ವಿಭಾಗಗಳಲ್ಲಿ 3-4 ಜನರನ್ನೊಳಗೊಂಡ ರಕ್ಷಣಾ ಪಡೆಯನ್ನು ರಚಿಸಿ ಹಾವಳಿ ಪ್ರದೇಶಗಳನ್ನು ಗುರುತಿಸಿ ಜನಸಂಪರ್ಕ ಸಭೆ ನಡೆಸಲು ಹಾಗೂ ಮುಂಜಾಗ್ರತಾ ಕ್ರಮವಾಗಿ ಹಾವಳಿ ಇರುವ ಕಡೆ ರಾತ್ರಿ ಗಸ್ತು ಮಾಡಲು ಮತ್ತು ಚಿರತೆ ಹಿಡಿಯಲು ಬೇಕಾದ ಬೋನು, Tranquilizer Gun ಮತ್ತಿತರೆ ಉಪಕರಣಗಳನ್ನು ಸಿದ್ಧತೆ ಮಾಡಿಕೊಂಡು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ವಲಯ ಅರಣ್ಯಾಧಿಕಾರಿಗಳೊಂದಿಗೆ ಭೇಟಿ ನೀಡಿ ಸಾರ್ವಜನಿಕರಿಗೆ ತಿಳುವಳಿಕೆ ನೀಡುವುದಲ್ಲದೇ, ಅದರಲ್ಲೂ ಕಾಡಂಚಿನಲ್ಲಿ ವಾಸಿಸುವ ಜನರಿಗೆ ಹೆಚ್ಚಿನ ತಿಳುವಳಿಕೆ ನೀಡಲಾಗುತ್ತಿದೆ.

ಸರ್ಕಾರದ ಆದೇಶ ಸಂಖ್ಯೆ: ಎಫ್‌ಇಇ 311 ಎಫ್‌ಇಜಿ 2022(ಇ), ದಿನಾಂಕ:31.01.2023 ರಲ್ಲಿ ಮೈಸೂರು ವೃತ್ತದ ಮೈಸೂರು/ ನಂಜನಗೂಡು / ಹೆಚ್.ಡಿ.ಕೋಟೆ / ಸರಗೂರು / ಟಿ.ನರಸೀಪುರ / ಮಂಡ್ಯ / ಪಾಂಡವಪುರ / ನಾಗಮಂಗಲ ವ್ಯಾಪ್ತಿಯಲ್ಲಿ ಚಿರತೆ ಹಾವಳಿ ಹೆಚ್ಚಾಗಿರುವ ಪ್ರದೇಶಗಳಲ್ಲಿ ಚಿರತೆ ಹಾವಳಿ ನಿಭಾಯಿಸುವ ನಿಟ್ಟಿನಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ವಿಭಾಗ, ಮೈಸೂರು ಇವರ ನೇತೃತ್ವದಲ್ಲಿ ಚಿರತೆ ಕಾರ್ಯಪಡೆಯನ್ನು (Leopard Task Force) ರಚಿಸಲಾಗಿದೆ.

| | | |
|---|---|---|
| | | ಚಿರತೆ ಕಾರ್ಯ ಪಡೆಯ ಕಾರ್ಯಾಚರಣೆಗಾಗಿ 05 ವಾಹನ ಮತ್ತು ಅಗತ್ಯ ಪರಿಕರಗಳನ್ನು ಒದಗಿಸಿಕೊಟ್ಟು ಹೊರಗುತ್ತಿಗೆ ಆಧಾರದ ಮೇಲೆ 40 ಸಿಬ್ಬಂದಿಗಳನ್ನು ನಿಯೋಜಿಸಿಕೊಂಡು ಕಾರ್ಯ ನಿರ್ವಹಿಸಲಾಗುತ್ತಿದೆ.<br><br>**<u>ಹುಲಿ ಹಾವಳಿ ತಡೆಗಟ್ಟಲು:</u>**<br><br>ರಾಜ್ಯದಲ್ಲಿ ಹುಲಿ ಹಾವಳಿ ಕಂಡು ಬಂದಂತಹ ಸಂದರ್ಭದಲ್ಲಿ, ಹಾವಳಿ ತಡೆಗಟ್ಟಲು ಅರಣ್ಯಾಧಿಕಾರಿಗಳಿಗೆ ಮುಂಜಾಗ್ರತಾ ಕ್ರಮವಾಗಿ ತಮ್ಮ ವಿಭಾಗಗಳಲ್ಲಿ 3-4 ಜನರನ್ನೊಳಗೊಂಡ ರಕ್ಷಣಾ ಪಡೆಯನ್ನು ರಚಿಸಿ ಹಾವಳಿ ಪ್ರದೇಶಗಳನ್ನು ಗುರುತಿಸಿ ಜನಸಂಪರ್ಕ ಸಭೆ ನಡೆಸಲು ಹಾಗೂ ಮುಂಜಾಗ್ರತಾ ಕ್ರಮವಾಗಿ ಹಾವಳಿ ಇರುವ ಕಡೆ ಹಗಲು-ರಾತ್ರಿ ಗಸ್ತು ಮಾಡಲು ಮತ್ತು ಹುಲಿ ಹಿಡಿಯಲು ಬೇಕಾದ ಬೋನು, Tranquilizer Gun ಮತ್ತಿತರೆ ಉಪಕರಣಗಳನ್ನು ಸಿದ್ಧತೆ ಮಾಡಿಕೊಂಡು ಸಂಬಂಧಪಟ್ಟ ಅರಣ್ಯಾಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಸಾರ್ವಜನಿಕರಿಗೆ ಅರಿವು ನೀಡುವುದಲ್ಲದೇ, ಅದರಲ್ಲೂ ಕಾಡಂಚಿನಲ್ಲಿ ವಾಸಿಸುವ ಜನರಿಗೆ ಹೆಚ್ಚಿನ ತಿಳುವಳಿಕೆ ನೀಡಲಾಗುತ್ತಿದೆ.<br><br>ಮಾನವ ವನ್ಯಜೀವಿ ಸಂಘರ್ಷಕ್ಕೆ ಕಾರಣವಾದ ಹುಲಿಗಳನ್ನು ನಿರ್ದಿಷ್ಟವಾಗಿ ಗುರುತಿಸಿ, ಸೆರೆಹಿಡಿದು ಆಗಿಂದಾಗ್ಗೆ ಸೂಕ್ತ ಆವಾಸ ಸ್ಥಾನ / ಪುನರ್ವಸತಿ ಕೇಂದ್ರಗಳಿಗೆ ಸ್ಥಳಾಂತರಿಸಲಾಗಿದೆ. |
| ಈ) | ಕಾಡು ಪ್ರಾಣಿಗಳಿಂದ ರೈತರಿಗಾಗುವ ಹಾವಳಿಯನ್ನು ತಡೆಗಟ್ಟುವ ಸಲುವಾಗಿ ಮತ್ತು ಚಿರತೆಗಳನ್ನು ಹಿಡಿಯುವ ಸಲುವಾಗಿ ಮೈಸೂರು, ಕೊಡಗು,ಚಿಕ್ಕಮಗಳೂರು, ಹಾಸನ, ಶಿವಮೊಗ್ಗ, ಮತ್ತು ಉತ್ತರ ಕನ್ನಡ ಜಿಲ್ಲೆಗಳನ್ನು ಸೇರಿಸಿ, ಟಾಸ್ಕ್ ಫೋರ್ಸ್ ಸಮಿತಿಯನ್ನು ರಚನೆ ಮಾಡಲಾಗಿದೆಯೇ; ಮಾಡಿದ್ದಲ್ಲಿ, ಯಾವಾಗ ಮಾಡಲಾಗಿದೆ; ಸದರಿ ಟಾಸ್ಕ್ ಫೋರ್ಸ್ ಸಮಿತಿಯಿಂದ ಚಾಮರಾಜನಗರ ಜಿಲ್ಲೆಯನ್ನು ಕೈಬಿಡಲು ಕಾರಣವೇನು; (ವಿವರ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ: ಅಪಜೀ 170 ಎಫ್‌ಡಬ್ಲ್ಯೂಎಲ್ 2022 ಮತ್ತು ಅಪಜೀ 311 ಎಫ್‌ಇಜಿ 2022(ಇ), ದಿನಾಂಕ: 21.11.2022 ಗಳಲ್ಲಿ ಹಾಸನ, ಚಿಕ್ಕಮಗಳೂರು ಮೈಸೂರು, ಕೊಡಗು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಕಾಡಾನೆ ಹಾವಳಿ ಹೆಚ್ಚಾಗಿರುವ ಭಾಗಗಳಲ್ಲಿ ಕಾಡಾನೆ ಹಾವಳಿಯನ್ನು ತಡೆಗಟ್ಟಲು ಪ್ರತಿ ಜಿಲ್ಲೆಗೊಂದರಂತೆ ಅಧಿಕಾರಿ / ಸಿಬ್ಬಂದಿಗಳನ್ನೊಳಗೊಂಡ ಆನೆ ಕಾರ್ಯಪಡೆ (Elephant Task Force) ಯನ್ನು ರಚಿಸಲಾಗಿದೆ.<br><br>1. ಸದರಿ ಆನೆ ಕಾರ್ಯಪಡೆಗಾಗಿ ನಿಯಂತ್ರಣ ಕೊಠಡಿಯನ್ನು ಸ್ಥಾಪಿಸಿದ್ದು, ನಿಯಂತ್ರಣ ಕೊಠಡಿಗೆ ಬರುವ ಕರೆಗಳಿಗೆ ಸ್ಪಂದಿಸಿ ಕಾಡಾನೆಗಳನ್ನು ಹಿಮ್ಮೆಟ್ಟಿಸುವ ಕಾರ್ಯ ಕೈಗೊಳ್ಳಲಾಗುತ್ತಿದೆ.<br><br>2. ಆನೆ ಕಾರ್ಯಪಡೆಯ ಕಾರ್ಯಾಚರಣೆಗಾಗಿ 5 ವಾಹನ ಮತ್ತು ಅಗತ್ಯ ಪರಿಕರಗಳನ್ನು ಒದಗಿಸಿ ಕೊಟ್ಟು ಹೊರಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿಗಳನ್ನು ನಿಯೋಜಿಸಿಕೊಂಡು ಕಾರ್ಯನಿರ್ವಹಿಸಲಾಗುತ್ತಿದೆ. |

<table>
<tr>
<td>ಉ)</td>
<td>ಅರಣ್ಯ ಇಲಾಖೆಯಲ್ಲಿ ಹೆಚ್ಚುವರಿಯಾಗಿದ್ದ ಐ.ಎಫ್.ಎಸ್ ಅಧಿಕಾರಿಗಳನ್ನು ಬೇರೆ ಬೇರೆ ಇಲಾಖೆಗೆ ನಿಯೋಜಿಸಲಾಗಿದ್ದು, ಇವರನ್ನು ಕೇಂದ್ರ ಸರ್ಕಾರಕ್ಕೆ ಹಿಂತಿರುಗಿಸಲು ಸರ್ಕಾರಕ್ಕಿರುವ ತೊಂದರೆಗಳೇನು? (ವಿವರ ನೀಡುವುದು)</td>
<td>ಐ.ಎಫ್.ಎಸ್ ಒಟ್ಟು ವೃಂದ ಬಲ 164 ರಲ್ಲಿ ಕೇಂದ್ರ ಸರ್ಕಾರದ ನಿಯೋಜನೆ ಶೇ.20, ರಾಜ್ಯ ಸರ್ಕಾರದ ನಿಯೋಜನೆ ಶೇ.25ರಷ್ಟು, ತರಬೇತಿಗೆ ಶೇ.3.5ರಷ್ಟು ಹಾಗೂ ರಜೆ ಕಾಯ್ದಿರಿಸುವಿಕೆ ಮತ್ತು ಜೂನಿಯರ್ ಹುದ್ದೆಗಳ ಕಾಯ್ದಿರಿಸುವಿಕೆ ಶೇ.16.5ರಷ್ಟು ಹುದ್ದೆಗಳನ್ನು ತುಂಬಲು ನಿಗದಿಗೊಳಿಸಲಾಗಿದೆ. ಈ ಕುರಿತ ಅಧಿಸೂಚನೆ ಪ್ರತಿಯನ್ನು ಅನುಬಂಧ-2ರಲ್ಲಿ ಒದಗಿಸಲಾಗಿದೆ.<br><br>
ಇಲ್ಲದೇ, ಐಎಫ್‌ಎಸ್ ವೃಂದದ ಹುದ್ದೆಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ಮಾಹಿತಿಯನ್ನು ಒದಗಿಸಲಾಗಿದೆ.<br><br>
<table>
<tr><td>ರಾಜ್ಯ ಸರ್ಕಾರಕ್ಕೆ ಮಂಜೂರಾದ ಐಎಫ್ ಎಸ್ ವೃಂದದ ಒಟ್ಟು ಹುದ್ದೆಗಳ ಸಂಖ್ಯೆ</td><td>164</td></tr>
<tr><td>ಪ್ರಸ್ತುತ ರಾಜ್ಯ ಸರ್ಕಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ರಾಜ್ಯ ವೃಂದದ ಐಎಫ್‌ಎಸ್ ಅಧಿಕಾರಿಗಳ ಸಂಖ್ಯೆ</td><td>115</td></tr>
<tr><td>ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ನಿಯೋಜನೆ ಮೇಲೆ ತೆರಳಿರುವ ಐಎಫ್‌ಎಸ್ ಅಧಿಕಾರಿಗಳ ಸಂಖ್ಯೆ</td><td>02</td></tr>
</table>
<br>
ಆದ್ದರಿಂದ, ಇನ್ನೂ ಐ.ಎಫ್.ಎಸ್ ವೃಂದದ ಹುದ್ದೆಗಳ ಕೊರತೆಯಿದ್ದು, ಹೆಚ್ಚಾಗಿರುವುದಿಲ್ಲ. ಹೀಗಾಗಿ, ಕೇಂದ್ರ ಸರ್ಕಾರಕ್ಕೆ ಹಿಂತಿರುಗಿಸುವ ಪ್ರಮೇಯ ಉದ್ಭವಿಸುವುದಿಲ್ಲ.</td>
</tr>
<tr>
<td>ಊ)</td>
<td>ಲಕ್ಷಾಂತರ ಎಕರೆ ಕಾಡಿನಲ್ಲಿ ಕೇವಲ ಇಬ್ಬರು ಗಾರ್ಡ್‌ಗಳು ಹಾಗೂ 50-60 ವರ್ಷ ವಯಸ್ಸಾಗಿರುವ ದಿನಗೂಲಿ ವಾಚರ್‌ಗಳನ್ನು ಬಿಟ್ಟರೆ ಐಎಫ್‌ಎಸ್ ಅಧಿಕಾರಿಗಳು ಹೆಚ್ಚಾಗಿದ್ದು, ಸದರಿ ಅಧಿಕಾರಿಗಳನ್ನು ಕಾಡಿನ ಮೇಲ್ವಿಚಾರಣೆಗೆ ಖುದ್ದು ಹಾಜರಾಗಲು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು)</td>
<td>ರಾಜ್ಯದಲ್ಲಿನ ಅರಣ್ಯ ಪ್ರದೇಶ ಹಾಗೂ ವನ್ಯಜೀವಿ ಸಂಪತ್ತನ್ನು ಸಂರಕ್ಷಿಸಲು ಹಾಗೂ ಅಭಿವೃದ್ಧಿ ಪಡಿಸಲು, ಮುಂಚೂಣಿ ಸಿಬ್ಬಂದಿಗಳಾದ 1892 ಅರಣ್ಯ ವೀಕ್ಷಕ, 5494 ಅರಣ್ಯ ರಕ್ಷಕ ಹಾಗೂ 3008 ಉಪ ವಲಯ ಅರಣ್ಯಾಧಿಕಾರಿ-ಕಂ-ಮೋಜಣಿದಾರ ಮಂಜೂರಾದ ಹುದ್ದೆಗಳ ವೃಂದ ಬಲವಿದ್ದು, ಇಲಾಖೆಯಲ್ಲಿ ವೃತ್ತ ಮತ್ತು ವಿಭಾಗಗಳಲ್ಲಿ ಸಂಬಂಧಪಟ್ಟ ಐ.ಎಫ್.ಎಸ್. ಅಧಿಕಾರಿಗಳು ಕ್ಷೇತ್ರ ಸಿಬ್ಬಂದಿಗಳಿಗೆ ಕಾಲಕಾಲಕ್ಕೆ ಸೂಕ್ತ ಮಾರ್ಗದರ್ಶನ ನೀಡಿ, ಪ್ರಮುಖ ಸಂದರ್ಭಗಳಲ್ಲಿ ಕಾಡಿನ ಮೇಲ್ವಿಚಾರಣೆಗೆ ಖುದ್ದು ಹಾಜರಿರುತ್ತಾರೆ.<br><br>
ಆದ್ದರಿಂದ, ಕ್ಷೇತ್ರ ಸಿಬ್ಬಂದಿಗಳು ಒಟ್ಟು ಸಂಖ್ಯೆ: 9394 ಇದ್ದು, ಐಎಫ್‌ಎಸ್ ಅಧಿಕಾರಿಗಳ ಸಂಖ್ಯೆ: 115 ಮಾತ್ರವಿದೆ, ಅದರಲ್ಲೂ ವೃತ್ತಗಳು ಮತ್ತು ವಿಭಾಗಗಳ ಮುಖ್ಯಸ್ಥರ ಹುದ್ದೆಗಳು ಕ್ಷೇತ್ರ ಹುದ್ದೆಗಳಾಗಿದ್ದು, ಇವುಗಳಲ್ಲಿ ಐಎಫ್‌ಎಸ್ ಅಧಿಕಾರಿಗಳಿದ್ದಾರೆ.</td>
</tr>
</table>

ಋ) ಅರಣ್ಯ ಇಲಾಖೆಯಲ್ಲಿರುವ ಅರಣ್ಯ ರಕ್ಷಕರ ಖಾಲಿ ಹುದ್ದೆಗಳ ಸಂಖ್ಯೆ ಎಷ್ಟು; ಅರಣ್ಯ ಇಲಾಖೆಗೆ ಅಗತ್ಯವಿರುವ ಅರಣ್ಯ ರಕ್ಷಕರನ್ನು ನೇಮಕಾತಿ ಮಾಡಿ ಕಾಡನ್ನು ರಕ್ಷಿಸಲು, ಕಾಡನ್ನು ಕಾಯಲು, ಪ್ರಾಣಿಗಳ ಚಲನವಲನ ಗುರುತಿಸುವ ಬಗ್ಗೆ, ಸರ್ಕಾರ ಕೂಡಲೇ ನೇಮಕಾತಿ ಮಾಡಲು ಕ್ರಮ ವಹಿಸುವುದೇ; (ಮಾಹಿತಿ ನೀಡುವುದು)

ಅರಣ್ಯ ಇಲಾಖೆಯಲ್ಲಿರುವ ಅರಣ್ಯ ರಕ್ಷಕರ ಖಾಲಿ ಹುದ್ದೆಗಳ ಸಂಖ್ಯೆ ಈ ಕೆಳಕಂಡಂತಿವೆ.

| ವೃಂದ | ಮಂಜೂರಾದ ಹುದ್ದೆಗಳು | | | ಭರ್ತಿಯಾದ ಹುದ್ದೆಗಳು | | | ಖಾಲಿ ಇರುವ ಹುದ್ದೆಗಳು | | |
|---|---|---|---|---|---|---|---|---|---|
| | ನೇರ | ಬಡ್ತಿ | ಒಟ್ಟು | ನೇರ | ಬಡ್ತಿ | ಒಟ್ಟು | ನೇರ | ಬಡ್ತಿ | ಒಟ್ಟು |
| ಅರಣ್ಯ ರಕ್ಷಕ | 4125 | 1369 | **5494** | 2153 | 815 | **2968** | 1855 | 671 | **2526** |

ಅರಣ್ಯ ಇಲಾಖೆಗೆ ಅಗತ್ಯವಿರುವ ಅರಣ್ಯ ರಕ್ಷಕರನ್ನು ನೇಮಕಾತಿ ಮಾಡಿ ಕಾಡನ್ನು ರಕ್ಷಿಸಲು, ಕಾಡನ್ನು ಕಾಯಲು, ಪ್ರಾಣಿಗಳ ಚಲನವಲನ ಗುರುತಿಸುವ ಬಗ್ಗೆ ಈ ಕೆಳಕಂಡಂತೆ ಕ್ರಮ ಕೈಗೊಳ್ಳಲಾಗುತ್ತಿದೆ:-

1. 339 ಅರಣ್ಯ ರಕ್ಷಕ ಹುದ್ದೆಗಳನ್ನು ಭರ್ತಿ ಮಾಡಿ ಕರ್ತವ್ಯಕ್ಕೆ ವರದಿ ಮಾಡಿಕೊಂಡ ಅರಣ್ಯ ರಕ್ಷಕರನ್ನು ತರಬೇತಿಗೆ ನಿಯೋಜಿಸಲಾಗಿದೆ.
2. ಅರಣ್ಯ ಇಲಾಖೆಯಲ್ಲಿ ಅರಣ್ಯ ರಕ್ಷಕರ ವೃಂದದಲ್ಲಿ ಮಂಜೂರಾಗಿ ಖಾಲಿ ಇರುವ 506 ಹುದ್ದೆಗಳನ್ನು ನೇರ ನೇಮಕಾತಿ ಮುಖಾಂತರ ಭರ್ತಿ ಮಾಡಿಕೊಳ್ಳಲು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯಪಡೆ ಮುಖ್ಯಸ್ಥರು) ಇವರಿಗೆ ಸಹಮತಿಯನ್ನು ನೀಡಲಾಗಿರುತ್ತದೆ.

**ಸಂಖ್ಯೆ: ಅಪಜೀ 32 ಎಫ್‌ಡಬ್ಲ್ಯೂಎಲ್ 2023**

**(ಬಸವರಾಜ ಬೊಮ್ಮಾಯಿ)**
**ಮುಖ್ಯಮಂತ್ರಿ**

ಅನುಬಂಧ– 1

# 2022-23 ನೇ ಸಾಲಿನಲ್ಲಿ ವನ್ಯಪ್ರಾಣಿಗಳ ಹಾವಳಿಯಿಂದ ಉಂಟಾದ ಮಾನವ ಪ್ರಾಣ ಹಾನಿ ಪ್ರಕರಣಗಳ ವಿವರ

| ಕ್ರ.ಸ | ವಿಭಾಗ | ಸ್ಥಳ | ದಿನಾಂಕ | ವ್ಯಕ್ತಿ ಹೆಸರು | ವನ್ಯಪ್ರಾಣಿ | ಪರಾ |
|---|---|---|---|---|---|---|
| 1 | ಎಂ.ಎಂ.ಹಿಲ್ಸ್ | ಬಿದಿರಳ್ಳಿ ಗ್ರಾಮ, ಹನೂರು ತಾಲೂಕು, ರಾಮಾಪುರ ವನ್ಯಜೀವಿ ವ್ಯಾಪ್ತಿ | 13-04-2022 | ಜಡೆಮಾದಮ್ಮ | ಆನೆ | 7.50 |
| 2 | ಹಾಸನ | ಕೆಂಪನಾಳ ಗ್ರಾಮ, ಸಕಲೇಶಪುರ ತಾಲೂಕು | 10-05-2022 | ರವಿ | ಆನೆ | 7.50 |
| 3 | ಬನ್ನೇರುಘಟ್ಟ ಎನ್.ಪಿ | ಕಂದಾಯ ಗ್ರಾಮ, ಕೋಡಿಹಳ್ಳಿ ವನ್ಯಜೀವಿ ವ್ಯಾಪ್ತಿ | 17-05-2022 | ಜಯರಾಮು | ಆನೆ | 7.50 |
| 4 | ಕುಂದಾಪುರ | ಮಾಳ ಗ್ರಾಮ, ಕಾರ್ಕಳ ತಾಲೂಕು, ಮೂಡುಬಿದಿರೆ ವ್ಯಾಪ್ತಿ | 31-05-2022 | ರೋಹಿತ್ ಡಿಮೆಲ್ಲೊ | ಕಾಡೆಮ್ಮೆ | ರಸ್ತೆ ಅಪಘಾತ |
| 5 | ವಿಜಯಪುರ | ನಾಗರಾಳ, ಮುದ್ದೇಬಿಹಾಳ ತಾಲೂಕು | 03-06-2022 | ಮಲ್ಲನಗೌಡ ಶಿವರಾಯ ಬಿರಾದಾರ್ | ಮೊಸಳೆ | 7.50 |
| 6 | ನಾಗರಹೊಳೆ | ಆನೆಮಾಳ ಹಾಡಿ, ಡಿ.ಬಿ.ಕುಪ್ಪೆ ವನ್ಯಜೀವಿ ವ್ಯಾಪ್ತಿ | 08-06-2022 | ಪುಟ್ಟಾ | ಆನೆ | 7.50 |
| 7 | ನಾಗರಹೊಳೆ | ಧನುಗಾಲ ಗ್ರಾಮ, ಆನೆಚೌಕೂರು ವನ್ಯಜೀವಿ ವಲಯ | 11-06-2022 | ಚಾಮ | ಆನೆ | 7.50 |
| 8 | ಬಂಡೀಪುರ | ಶಿವಪುರ ಗ್ರಾಮ, ಜಿ.ಎಸ್.ಬೆಟ್ಟ ವ್ಯಾಪ್ತಿ | 15-06-2022 | ಬೆಳ್ಳಿಶೆಟ್ಟಿ | ಆನೆ | 7.50 |
| 9 | ವಿಜಯಪುರ | ಹಂದರಗಲ್, ಮುದ್ದೇಬಿಹಾಳ ತಾಲೂಕು | 29-06-2022 | ನಾಗಪ್ಪ ಸಂಜೀವಪ್ಪ ಹುಂಡಿ | ಮೊಸಳೆ | 7.50 |
| 10 | ಕುಂದಾಪುರ | ಪಜಮಂಗೂರು ಗ್ರಾಮ, ಬ್ರಹ್ಮಾವರ ತಾಲೂಕು | 30-06-2022 | ಗಣೇಶ್ | ಕಾಡು ಹಂದಿ | ರಸ್ತೆ ಅಪಘಾತ |
| 11 | ಹಾಸನ | ಕೆಳಗಲಳ್ಳಿ ಗ್ರಾಮ, ಸಕಲೇಶಪುರ ತಾಲೂಕು | 02-07-2022 | ಕೃಷ್ಣೇಗೌಡ | ಆನೆ | 7.50 |

| | | | | | | |
|---|---|---|---|---|---|---|
| 12 | ಬಂಡೀಪುರ | ದೇಯನಪುರ ಗ್ರಾಮ, ಹೆಡಿಯಾಲ ವ್ಯಾಪ್ತಿ | 31-07-2022 | ಪುಟ್ಟಸ್ವಾಮಿಗೌಡ | ಹುಲಿ | 7.50 |
| 13 | ಹಾಸನ | ಸುಳ್ಳಕ್ಕಿ ಗ್ರಾಮ, ಕಸಬಾ ಹೋಬಳಿ, ಸಕಲೇಶಪುರ. | 08-08-2022 | ಮಂಜುನಾಥ್ ಎಸ್ ಎಂ | ಆನೆ | 7.50 |
| 14 | ರಾಮನಗರ | ಚೆನ್ನಿಗನಹೊಸಹಳ್ಳಿ ಗ್ರಾಮ, ವಿರುಪಾಕ್ಷಿಪುರ ಹೋಬಳಿ, ಚನ್ನಪಟ್ಟಣ ವ್ಯಾಪ್ತಿ | 09-08-2022 | ಚೆನ್ನಮ್ಮ | ಆನೆ | 7.50 |
| 15 | ಶಿರಸಿ | ಸರಗುಪ್ಪ ಗ್ರಾಮ, ಜನಮನೆ ವ್ಯಾಪ್ತಿ | 10-08-2022 | ಓಂಕಾರ್ ಪದ್ಮಯ್ಯ ಜೈನ್ | ಕರಡಿ | 7.50 |
| 16 | ಮಡಿಕೇರಿ | ಕೂಡ್ಲೂರು ಚೆಟ್ಟಳ್ಳಿ ಗ್ರಾಮ, ಕುಶಾಲನಗರ ವ್ಯಾಪ್ತಿ | 10-08-2022 | ಮೊಹಮ್ಮದ್ ಸಿ.ಎಂ | ಆನೆ | 7.50 |
| 17 | ಬಂಡೀಪುರ | ಮುತ್ತಿಗೆಹುಂಡಿ, ನುಗು ವ್ಯಾಪ್ತಿ | 12-08-2022 | ಬಾಲನ್ ಪಿ | ಆನೆ | 7.50 |
| 18 | ಹಳಿಯಾಳ | ಅಲೈಡಾ ಏರಿಯಾ, ದಾಂಡೇಲಿ | 14-08-2022 | ಸುರೇಶ ವಸಂತ ತೇಲಿ | ಮೊಸಳೆ | 7.50 |
| 19 | ಚಿಕ್ಕಮಗಳೂರು | ಕೆಂಜಿಗೆ ಗ್ರಾಮ, ಮೂಡಿಗೆರೆ ವ್ಯಾಪ್ತಿ | 15-08-2022 | ಆನಂದ ದೇವಾಡಿಗ | ಆನೆ | 7.50 |
| 20 | ಬನ್ನೇರುಘಟ್ಟ | ಏಳುವನಾಥ್ ಬೀಟ್, ಕಾಡುಶಿವನಹಳ್ಳಿ ವಿಭಾಗ, ಕೋಡಿಹಳ್ಳಿ ರೇಂಜ್ | 21-08-2022 | ಭದ್ರುಗಿರಿಗೌಡ | ಆನೆ | 7.50 |
| 21 | ದಾವಣಗೆರೆ | ದಾಸರಹಟ್ಟಿ ಬೇಚಾರ್ ಗ್ರಾಮ, ಹೊನ್ನಾಳಿ ವ್ಯಾಪ್ತಿ | 23-08-2022 | ಕಮಲಿಬಾಯಿ | ಚಿರತೆ | 7.50 |
| 22 | ಚಿಕ್ಕಮಗಳೂರು | ಊರುಬಗೆ ಗ್ರಾಮ, ಮೂಡಿಗೆರೆ ವ್ಯಾಪ್ತಿ | 08-09-2022 | ಅರ್ಜುನ | ಆನೆ | 7.50 |
| 23 | ನಾಗರಹೊಳೆ | ಕಾನೂರು ಚೈಂಗೇಟ್ ಹತ್ತಿರ, ನಾಗರಹೊಳೆ ವ್ಯಾಪ್ತಿ | 24-09-2022 | ಜೆ.ಕೆ.ಕೃಷ್ಣ | ಹುಲಿ | 7.50 |
| 24 | ಮೈಸೂರು | ಎಂ.ಎಲ್.ಹುಂಡಿ ಗ್ರಾಮ, ತಿ.ನರಸೀಪುರ ವ್ಯಾಪ್ತಿ | 31-10-2022 | ಮಂಜುನಾಥ್ | ಚಿರತೆ | 7.50 |
| 25 | ಹಾಸನ | ಹೆಬ್ಬನಹಳ್ಳಿ ಗ್ರಾಮ, ಸಕಲೇಶಪುರ ತಾಲ್ಲೂಕು | 01-11-2022 | ಮನು ಎಚ್.ಜಿ | ಆನೆ | 7.50 |
| 26 | ಬನ್ನೇರುಘಟ್ಟ ಎನ್.ಪಿ | ಜಗಂಪನ ಹಳ್ಳ ಬಿಳೀಕಲ್ ಸ್ಟೇಟ್ ಫಾರೆಸ್ಟ್ | 07-11-2022 | ಹೊಳಸಲಯ್ಯ (ಪಿಸಿಪಿ ಅರಣ್ಯ ವೀಕ್ಷಕ) | ಆನೆ | 7.50 |
| 27 | ಚಿಕ್ಕಮಗಳೂರು | ಕುಂದೂರು ಗ್ರಾಮ, ಆಲ್ದೂರು ವ್ಯಾಪ್ತಿ | 20-11-2022 | ಶೋಭಾ | ಆನೆ | 7.50 |
| 28 | ಮೈಸೂರು | ಎಸ್.ಕೆಬ್ಬೆ ಹುಂಡಿ ಗ್ರಾಮ | 01-12-2022 | ಮೇಘನಾ | ಚಿರತೆ | 7.50 |

| | | | | | | |
|---|---|---|---|---|---|---|
| 29 | ಭದ್ರಾವತಿ | ರಾಗಿ ಬಸವನಹಳ್ಳಿ, ಗ್ರಾಮ | 24-12-2022 | ಈರಪ್ಪ | ಆನೆ | 15.00 |
| 30 | ಬಿ.ಆರ್.ಟಿ | ಪುನಜೂರು ಶ್ರೇಣಿ | 25-12-2022 | ರಾಜು | ಕರಡಿ | ಅರಣ್ಯ ಪ್ರದೇಶದೊಳಗೆ ನಡೆದ ಘಟನೆ |
| 31 | ಕೊಪ್ಪ | ಕಳಸ ವ್ಯಾಪ್ತಿ, ಬಾಳೆಹೊಳೆ ವಿಭಾಗ, ತೋಟದೂರು | 29-12-2022 | ಸೋಮಶೇಖರ್ | ಕಾಡೆಮ್ಮೆ | 15.00 |
| 32 | ಹುಣಸೂರು | ಹುಣಸೂರು ಶ್ರೇಣಿ, ಬಿಳಿಕೆರೆ ವಿಭಾಗ, ಚಿಕ್ಕಬೀಚನಹಳ್ಳಿ, ಗ್ರಾಮ | 30-12-2022 | ಚಿಕ್ಕಮ್ಮ ಸಿ/ಒ ಸಿದ್ದೇಗೌಡ | ಆನೆ | 15.00 |
| 33 | ಮಂಗಳೂರು | ಕೊಣಾಜಿ ಮೀಸಲು ಅರಣ್ಯ, ಶಿರಾಡಿ ಗ್ರಾಮ, ಉಪ್ಪಿನಂಗಡಿ ವ್ಯಾಪ್ತಿ | 31-12-2022 | ತಿಮ್ಮಪ್ಪ | ಆನೆ | 5.00 |
| 34 | ನಾಗರಹೊಳೆ | ಮೇಟಿಕುಪ್ಪೆ ಶ್ರೇಣಿ | 01-01-2023 | ಮಹದೇವಸ್ವಾಮಿ (ಪಿಸಿಪಿ ವೀಕ್ಷಕ) | ಆನೆ | 5.00 |
| 35 | ಬಿ.ಆರ್.ಟಿ | ಸಿ.ನಗರ ವ್ಯಾಪ್ತಿ | 19-01-2023 | ನಂಜಪ್ಪ (ವೀಕ್ಷಕ) | ಆನೆ | 2.00 |
| 36 | ಮೈಸೂರು (ಟಿ) | ಕನ್ನನಾಯಕನಹಳ್ಳಿ, ಗ್ರಾಮ, ತಿ.ನರಸೀಪುರ ವ್ಯಾಪ್ತಿ | 20-01-2023 | ಸಿದ್ದಮ್ಮ | ಚಿರತೆ | 15.00 |
| 37 | ಮೈಸೂರು (ಟಿ) | ಹೊರಲಹಳ್ಳಿ, ಗ್ರಾಮ ತಿ.ನರಸೀಪುರ ವ್ಯಾಪ್ತಿ | 22-01-2023 | ಜಯಂತ್ ಹೆಚ್.ಡಿ | ಚಿರತೆ | 15.00 |
| 38 | ನಾಗರಹೊಳೆ | ಡಿ.ಬಿ.ಕುಪ್ಪೆ | 22-01-2023 | ಮಂಜು | ಹುಲಿ | 2.50 |
| 39 | ಮಡಿಕೇರಿ | ಶಾಂತಾಪುರ ಗ್ರಾಮ, ಸೋಮವಾರಪೇಟೆ Tq, ಶನಿವಾರಸಂತೆ ವ್ಯಾಪ್ತಿ | 05-02-2023 | ಕುಮಾರ | ಆನೆ | 5.00 |
| 40 | ನಾಗರಹೊಳೆ | ನಲ್ಲಿರ ಪೂಣಚ ಎಸ್ಟೇಟ್, ಹುಲಿಕಲ್ ಬೀಟ್, ನಾಗರಹೊಳೆ ರೇಂಜ್ | 12-02-2023 | ಚೇತನ್ | ಹುಲಿ | 5.00 |
| 41 | ನಾಗರಹೊಳೆ | ನಲ್ಲಿರ ಪೂಣಚ ಎಸ್ಟೇಟ್, ಹುಲಿಕಲ್ ಬೀಟ್, ನಾಗರಹೊಳೆ ರೇಂಜ್ | 13-02-2023 | ರಾಜು | ಹುಲಿ | 5.00 |

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ,
(ವನ್ಯಜೀವಿ) ಮತ್ತು ಮುಖ್ಯ ವನ್ಯಜೀವಿ ಪರಿಪಾಲಕರು,
ಕರ್ನಾಟಕ, ಬೆಂಗಳೂರು

ಅನುಬಂಧ - 2

# TABLE - 3

## GOVERNMENT OF KARNATAKA

NO. DPAR 67 SFP 2017

Government of Karnataka Secretariat
Vidhana Soudha Bengaluru,

Dated 27.04.2019

## NOTIFICATION

The Order No.160 16/0/2017-AIS-II (A), dated Q4th April 20 S 9 of Government of India. Ministry of Personnel. Public Grievances and Pensions, Department of Personnel and Training. New Delhi is here by re-published.

No. 160 16/01/2017-AIS-II (A)

Government of India

Ministry of Personnel, Public Grievances and Pensions

Department of Personnel and Training

North Block, Central Secretariat
New Delhi, Dated 04th, April. 2019.

## NOTIFICATION

G S.R. 288 (E).- In exercise of the powers conferred by sub-section (1) of Section 3 of the All India Service Act. 1951 (61 of 1951), read with sub-rules (1) and (2) of Rule 4 of Indian Forest Service (Cadre) Rules. 1966, the Central Government in consultation with the Government of Karnataka hereby makes the following regulations further to amend the Indian Forest Service (Fixation of Cadre Strength) Regulations. 1966. namely:

1. i) These regulations shall be called the Indian Forest Service (Fixation of Cadre Strength) Amendment Regulations, 2019.

   ii) They shall come into force on the date of their publication in the Official Gazette.

2. In the Indian Forest Service (Fixation of Cadre Strength) Regulations. 1966, in the Schedule, for the heading "Karnataka" and the entries relating thereto, the following shall be substituted, namely:

## KARNATAKA

| | | |
|---|---|---|
| | **Senior Duty posts under the State Government** | 100 |
| | Principal Chief Conservator of Forests & HoFF | 1 |
| | Principal Chief Conservator of Forests (Wildlife) | 1 |
| | Principal Chief Conservator of Forests<br>(Evaluation, Working Plan, Research, Training & Climate Change) | 1 |
| | Principal Chief Conservator of Forests (Development) | 1 |
| | Additional Principal Chief Conservator of Forests (Forest Resource Management) | 1 |
| | Additional Principal Chief Conservator of Forests (Administration & Coordination) | 1 |
| | Additional Principal Chief Conservator of Forests (Vigilance) | 1 |
| | Additional Principal Chief Conservator of Forests (Personnel & Recruitment) | 1 |
| | Additional Principal Chief Conservator of Forests, Research | 1 |
| | Additional Principal Chief Conservator of Forests (Forest Conservation) | 1 |
| | Additional Principal Chief Conservator of Forests (Social Forestry & Project) | 1 |
| | Additional Principal Chief Conservator of Forests (Wildlife) | 1 |
| | Additional Principal Chief Conservator of Forests (Publicity & ICT) | 1 |
| | Additional Principal Chief Conservator of Forests (Land Records) | 1 |
| | Additional Principal Chief Conservator of Forests (CAMPA) | 1 |
| | Additional Principal Chief Conservator of Forests (Working Plan) | 1 |
| | Additional Principal Chief Conservator of Forests & Secretary (Forests) | 1 |
| | Additional Principal Chief Conservator of Forests & Member Secretary, Zoo Authority of Karnataka, Mysuru. | 1 |
| | Additional Principal Chief Conservator of Forests (Human Resource Development) | 1 |
| | Additional Principal Chief Conservator of Forests (Legal Cell) | 1 |
| | Additional Principal Chief Conservator of Forests (Project Tiger) | 1 |
| | Chief Conservator of Forests (Territorial ) | 13 |
| | Chief Conservator of Forests (Working Plan) | 6 |
| | Conservator of Forests (Research) | 4 |

| | | |
|---|---|---|
| | Conservator of Forests & Director, BRT Reserve, Chamarajanagar | 1 |
| | Conservator of Forests (Forest Resource Management) | 1 |
| | Conservator of Forests (Development) | 1 |
| | Conservator of Forests (Budget & Audit) | 1 |
| | Director. Rajiv Gandhi National Park | 1 |
| | Director, Bandipur National Park | 1 |
| | Field Director, Bhadra Tiger Reserve, Chickamagalur | 1 |
| | Director, Anshi-Dandeli National Park | 1 |
| | Deputy Conservator of Forests, Kuduremukh Wild Life Division | 1 |
| | Conservator of Forests, Bannerghatta National Park | 1 |
| | Deputy Conservator of Forests, Wild Life Division, Madikeri | 1 |
| | Deputy Conservator of Forests, Wild Life Division, Shivamogga | 1 |
| | Deputy Conservator of Forests. Cauverv Wild Life Division. Kollegal | 1 |
| | Deputy Conservator of Forests (Territorial) | 39 |
| | Deputy Conservator of Forests, Male Mahadeshwara Wild Life Sanctuary, Kollegal | 1 |
| | Deputy Conservator of Forests (Training) | 2 |
| | Deputy Conservator of Forests (Head Quarters) | 1 |
| 1. | **Total Senior Duty Posts** | **100** |
| 2. | Central Deputation Reserve not exceeding 20% of Item 1 above | 20 |
| 3. | State Deputation Reserve not exceeding 25% of Item I above | 25 |
| 4. | Training Reserve not exceeding 3.5% of item I above | 3 |
| 5. | Leave Reserve and Junior Posts Reserve not exceeding 16.5% of Item I above | 16 |
| 6. | Posts to be filled by promotion under Rule 8 of the Indian Forest Service (Recruitment) Rules 1966 not exceeding 33 1/3% of Item 1.2.3 and 4 above. | 49 |
| 7. | Posts to be filled UP by Direct Recruitment (Item 1+2+3+4+5+6) | 115 |
| 8. | **Total Authorised Strength (Item 6+7 above)** | **164** |

*(No. 160 16/0 /2017-A.IS-I (A)*

*VASANTHI V. BABU, Under Secy.*